ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.6/2026

| | | |
|---|---|---|
| ಸಾಕ್ಷಿದಾರರ ಹೆಸರು | ಹರ್ಷವರ್ದನ್ ಹೆಚ್.ಕೆ | ಸಿ.ಡಬ್ಲ್ಯೂ 1 ಪಿ.ಡಬ್ಲ್ಯೂ1 |
| ತಂದೆಯ ಹೆಸರು | ಕ್ಷೇತ್ರ ಪಾಲೇಗೌಡ | |
| ವಯಸ್ಸು | 34 ವರ್ಷ | |
| ಉದ್ಯೋಗ | ಪಿ.ಎಸ್.ಐ ಮೂಡಿಗೆರೆ ಪೊಲೀಸ್ ಠಾಣೆ | |
| ವಾಸ ಸ್ಥಳ | ಮೂಡಿಗೆರೆ | |

ದಿನಾಂಕಃ 19.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನಾನು ದಿಃ 16.06.2023 ರಿಂದ ದಿಃ 28.01.2026 ರವರೆಗೆ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 29.10.2025 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ನಾನು ಗೋಣಿಬೀಡು ಸರ್ಕಲ್ ನಲ್ಲಿ ಚಾಸಾ.2 ರಿಂದ 4 ರವರ ಜೊತೆ ಗಸ್ತು ಕರ್ತವ್ಯ ನಿರ್ವಹಿಸುತ್ತಿರುವಾಗ ಅಬಚೂರು ಗ್ರಾಮದ ವಾಸಿಯಾದ ಆರೋಪಿ ಮಹೆಂದ್ರ ಬಿನ್ ಬೈರಪ್ಪ ರವರು ತಮ್ಮ ವಾಸದ ಮನೆಯ ಮುಂಭಾಗ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಕಲಂ 54 ಅಡಿಯಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಸಂಜೆ 3.30 ರ ಸುಮಾರಿಗೆ ಅಬಚೂರು ಗ್ರಾಮಕ್ಕೆ ಹೋಗಿದ್ದು ರಸ್ತೆಯ ಬದಿಯಲ್ಲಿ ಮಾತನಾಡುತ್ತಾ ನಿಂತಿದ್ದ ಚಾಸಾ.5 ಮತ್ತು 6 ರವರಿಗೆ ಈ ಪ್ರಕರಣದ ಬಗ್ಗೆ ಮಾಹಿತಿಯನ್ನು ತಿಳಿಸಿ ಈ ಪ್ರಕರಣದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅವರು ಒಪ್ಪಿದ ಮೇರೆಗೆ ಅವರಿಗೆ ನೋಟೀಸು ನೀಡಿ ಇಲಾಖಾ ಜೀಪಿನಲ್ಲಿ ಅವರನ್ನು ಕರೆದುಕೊಂಡು 3.40 ಗಂಟೆಗೆ ಅಬಚೂರು ಗ್ರಾಮದ ಆರೋಪಿಯ ಮನೆಯ ಮುಂದಿನ ರಸ್ತೆಯಲ್ಲಿ ನಿಂತು ನೋಡಲಾಗಿ

ಆರೋಪಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುವುದು ಕಂಡು ಬಂದಿದ್ದು, ದಾಳಿ ಮಾಡಿದಾಗಿ ಆರೋಪಿ ಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ನಂತರ ಪಂಚರ ಬಳಿ ಆರೋಪಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ಮಹೇಂದ್ರ ಅಬಚೂರು ಗ್ರಾಮ ಎಂದು ತಿಳಿಸಿರುತ್ತಾರೆ. ನಂತರ ಆರೋಪಿ ಬಿಟ್ಟು ಹೋಗಿದ್ದ ಬಿಳಿ ಬಣ್ಣದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ Select Indian Bag Piper XXX Rum ಕಂಪನಿಯ 180 ಎಂ.ಎಲ್ ನ ಒಟ್ಟು 5 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಪತ್ತೆಯಾಗಿದ್ದವು. Bagpiper Deluxe Whisky ಕಂಪನಿಯ 180 ಎಂ.ಎಲ್ ನ ಒಟ್ಟು 2 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಪತ್ತೆಯಾಗಿದ್ದವು. Old Tavern Whisky ಕಂಪನಿಯ 180 ಎಂ.ಎಲ್ ನ ಒಟ್ಟು 4 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಪತ್ತೆಯಾಗಿದ್ದವು. Johns Original Choice Deluxe Whisky ಕಂಪನಿಯ 90 ಎಂ.ಎಲ್ ನ ಒಟ್ಟು 5 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಪತ್ತೆಯಾಗಿದ್ದವು. Windsor Deluxe Whisky ಕಂಪನಿಯ 90 ಎಂ.ಎಲ್ ನ ಒಟ್ಟು 5 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಪತ್ತೆಯಾಗಿದ್ದವು. Amrit Silver Cup Rare Indian Brandy ಕಂಪನಿಯ 90 ಎಂ.ಎಲ್ ನ ಒಟ್ಟು 10 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಕಂಡು ಬಂದವು.

3. ನಂತರ ಸ್ಥಳದಲ್ಲಿಯೇ ವರದಿಯನ್ನು ತಯಾರಿಸಿ ಠಾಣಾ ಎಸ್.ಹೆಚ್.ಓ ಕರ್ತವ್ಯದಲ್ಲಿ ಇದ್ದ ಹೆಚ್.ಸಿ ಚಾಸಾ.12 ರವರಿಗೆ ಪ್ರಕರಣ ದಾಖಲಿಸುವಂತೆ ಸೂಚಿಸಿದ್ದು ಸದರಿ ವರದಿಯನ್ನು ಚಾಸಾ.4 ರವರ ಹಸ್ತಾ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಪ್ರಕರಣ ದಾಖಲಾದ ಬಗ್ಗೆ ಚಾಸಾ.12 ರವರು ಪ್ರಕರಣ ದಾಖಲು ಮಾಡಿದ ಬಗ್ಗೆ ನನಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ತಕ್ಷೀರು ಸ್ಥಳದಲ್ಲಿ ಮಹಜರ್ ಕ್ರಮವನ್ನು 4.20 ರಿಂದ 5.20 ರವರೆಗೆ ಮಹಜರ್ ನ್ನು ಜರುಗಿಸಿರುತ್ತೇನೆ.

4. ಕೃತ್ಯ ನಡೆದ ಸ್ಥಳದಲ್ಲಿ ವಶಕ್ಕೆ ಪಡೆದಿರುವ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು

ಬಿಳಿ ಚೀಲದಲ್ಲಿ ಹಾಕಿ 'ಪಿ' ಎಂಬ ಅರಗು ಸೀಲು ಹಾಕಿ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಮಹಜರ್ ಕಾಲದಲ್ಲಿ ಛಾಯಚಿತ್ರವನ್ನು ಮತ್ತು ವಿಡಿಯೋವನ್ನು ತೆಗೆಸಿರುತ್ತೇನೆ. ಸ್ಥಳದಲ್ಲಿಯೇ ಕರಡು ನಕ್ಷೆಯನ್ನು ತಯಾರು ಮಾಡಿರುತ್ತೇನೆ. ಮಾಲುಗಳೊಂದಿಗೆ ಠಾಣೆಗೆ ವಾಪಸ್ಸು ಬಂದು, ವಶಕ್ಕೆ ಪಡೆದುಕೊಂಡ ಮಾಲುಗಳನ್ನು ಠಾಣಾ ಸ್ವತ್ತಿನ ಪಟ್ಟಿ ಸಂಖ್ಯೆ 116/2025 ರಂತೆ ನಮೂದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ.2 ರವರಿಂದ ಛಾಯಚಿತ್ರವನ್ನು ಸಿ.ಡಿ ಮಾಡಿದ ಬಗ್ಗೆ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

5. ನಂತರ ದಿಃ 30.10.2025 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು ಆತನಿಗೆ ನೋಟೀಸು ಜಾರಿ ಮಾಡಿ ತನಿಖೆಗೆ ಸಹಕರಿಸುವಂತೆ ಸೂಚಿಸಿ ಕಳುಹಿಸಿಕೊಟ್ಟಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.13 ರವರಿಗೆ ವರ್ಗಾಯಿಸಿರುತ್ತೇನೆ.

6. ಶೋಧನಾ ಸಮುಚಿತ ಆಧಾರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಮತ್ತು ಕರಡು ನಕ್ಷೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ 1 ಛಾಯಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಛಾಯಚಿತ್ರವನ್ನು ನಿ.ಪಿ.4 ಎಂದು ಗುರುತಿಸಲಾಯಿತು, ಪಂಚರುದಾರರಿಗೆ ನೀಡಿದ ನೋಟೀಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು, 1 ದೃಢೀಕರಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.6 ಎಂದು, ಸಿ.ಡಿ ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ7 ಎಂದು ಗುರುತಿಸಲಾಯಿತು.

7. ಎಲ್ಲಾ ಖಾಲಿ ಟೆಟ್ರಾ ಪ್ಯಾಕ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು

ಮು.ಮಾ.1 ಎಂದು, ಬಿಳಿ ಚೀಲವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು, ಸದರಿ ಚೀಲದ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನ್ಯಾಯಾಲಯದ ಮುಂದೆ ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಶ್ರೀ ಹೆಚ್.ಜಿ.ಎ ವಕೀಲರಿಂದ – ಆರೋಪಿ ಪರವಾಗಿ</u>

8. ದಿಃ 29.10.2025 ರಂದು ಬೆಳಿಗ್ಗೆ 9.30 ಕ್ಕೆ ಕಚೇರಿಗೆ ಹಾಜರಾಗಿದ್ದೆ. ನಾನು ಆ ದಿನ ಗೋಣಿಬೀಡು, ಜನ್ನಾಪುರ, ಮರೆಬೈಲಿನಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದೆ. ಘಟನೆಯ ಬಗ್ಗೆ ಮಾಹಿತಿ ಲಿಖಿತವಾಗಿ ಬಂದಿಲ್ಲ. ಪೊಲೀಸ್ ಠಾಣೆಯಿಂದ ಅಬಚೂರು ಗ್ರಾಮ 8 ಕಿಮಿ ಅಂತರ ಇದೆ. ಜನ್ನಾಪುರದಿಂದ ಅಬಚೂರು ಗ್ರಾಮ 4 ಕಿಮೀ ಅಂತರದಲ್ಲಿ ಇದೆ. ಜನ್ನಾಪುರದಿಂದ ಅಬಚೂರು ಗ್ರಾಮಕ್ಕೆ ಹೋಗಲು 10 ನಿಮಿಷ ತಗುಲುತ್ತದೆ. ವರದಿಯನ್ನು ತಯಾರಿಸಲು 20 ನಿಮಿಷ ತಗುಲಿತ್ತು. ಗಸ್ತು ಕಾರ್ಯಕ್ಕೆ ಹೋದಾಗ ಐ.ಓ ಕಿಟ್ ಅನ್ನು ಜೀಪಿನಲ್ಲಿ ತೆಗೆದುಕೊಂಡು ಹೋಗುತ್ತೇನೆ. ಮಹಜರ್ ನಲ್ಲಿ ಆರೋಪಿಯ ಚಹರೆಯನ್ನು ನಮೂದಿಸಿಲ್ಲ. ಸಾಕ್ಷಿದಾರರಿಗೆ ನೋಟೀಸು ನೀಡಿದಾಗ 3.20 ರ ಸಮಯ ಆಗಿತ್ತು. ನೋಟೀಸಿನಲ್ಲಿ ಸಮಯವನ್ನು ನಮೂದಿಸಿದ್ದೇನೆ. ನೋಟೀಸಿನಲ್ಲಿ ಸಮಯವನ್ನು ನಾನು ನಮೂದಿಸಿಲ್ಲ ಎಂದರೆ ಸರಿಯಲ್ಲ.

9. ಆರೋಪಿಯ ಮನೆಯ ಬಳಿ ಹೋದಾಗ ಸಾರ್ವಜನಿಕರು ಇರಲಿಲ್ಲ. ಬಿಳಿ ಚೀಲದ ಮೇಲೆ ಯಾವುದೇ ಗುರುತು ಇರಲಿಲ್ಲ. ಆರೋಪಿಯ ಪರಿಚಯ ನನಗೆ ಮೊದಲು ಇರಲಿಲ್ಲ. ಆರೋಪಿಯ ವಿಳಾಸವನ್ನು ಪೊಲೀಸ್ ಬಾತ್ಮಿದಾರರು ತಿಳಿಸಿದ್ದರು. ಸ್ಥಳದಲ್ಲಿ ಮನೆಯ ದಾಖಲೆಗಳನ್ನು ನಾನು ಪರಿಶೀಲಿಸಲಿಲ್ಲ. ನ್ಯಾಯಾಲಯದ ಮುಂದೆ ಇರುವಂತಹ ಖಾಲಿ ಟೆಟ್ರಾ ಪ್ಯಾಕ್ ಗಳು ಮದ್ಯದ ಅಂಗಡಿಗಳಲ್ಲಿ ದೊರಕುತ್ತದೆ ಎಂದರೆ ಸರಿ. ಆ ರೀತಿ ದೊರೆತ ಖಾಲಿ ಟೆಟ್ರಾ ಪ್ಯಾಕ್ ಗಳನ್ನು ಪಡೆದುಕೊಂಡು ಠಾಣ ಅಂಕಿ ಅಂಶಗಳಿಗಾಗಿ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಛಾಯಚಿತ್ರವನ್ನು ಈ

ಕೇಸಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

10. ಮಹಜರ್ ಅನ್ನು ಪೊಲೀಸ್ ಠಾಣೆಯಲ್ಲಿಯೇ ಜರುಗಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಸ್ಥಳಕ್ಕೆ ಭೇಟಿ ನೀಡಿಲ್ಲ, ಯಾವುದೇ ಮುದ್ದೆ ಮಾಲುಗಳನ್ನು ಮಹಜರ್ ಮೂಲಕ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ. ಮಹಜರ್ ಅನ್ನು ಠಾಣೆಯಲ್ಲಿಯೇ ಬನಾವಟ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.2 ಬಿಳಿ ಪ್ಲಾಸ್ಟಿಕ್ ಚೀಲ ಅಲ್ಲ ಎಂದರೆ ಸಾಕ್ಷಿ ಚೀಲದ ಮೇಲೆ ಬಿಳಿ ಬಣ್ಣ ಇದ್ದು, ಒಳಗಡೆ ಬೇರೆ ಬಣ್ಣ ಇರುತ್ತದೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಮು.ಮಾ.2 ಚೀಲದ ಒಳಗಡೆ ಬೇರೆ ಬಣ್ಣ ಇರುತ್ತದೆ ಎಂದು ನಮೂದಿಸಿಲ್ಲ. ಮು.ಮಾ.1 ಪೌಚ್ ಗಳ ಮೇಲೆ ಇರುವ ಸಿರಿಯಲ್ ನಂಬರ್, ಬ್ಯಾಚ್ ಸಂಖ್ಯೆ, ಎಂ.ಆರ್.ಪಿ ಧರವನ್ನು ಮಹಜರ್ ನಲ್ಲಿ ಬರೆದಿದ್ದೀರಾ ಎಂದರೆ ಸಾಕ್ಷಿ ಸಿರಿಯಲ್ ನಂಬರ್ ಕಿತ್ತು ಹಾಕಿದ್ದರು, ಆದ್ದರಿಂದ ಬ್ಯಾಚ್ ನಂಬರ್ ಮತ್ತು ಎಂ.ಆರ್.ಪಿ ಧರವನ್ನು ಮಹಜರ್ ನಲ್ಲಿ ನಮೂದಿಸಿದ್ದೇನೆ ಎಂದು ನುಡಿಯತ್ತಾರೆ. ಆರೋಪಿ ಯಾವ ದಿಕ್ಕಿನ ಕಡೆ ಓಡಿ ಹೋದರು ಎಂದು ಮಹಜರ್ ನಲ್ಲಿ ಬರೆದಿಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ